೫. ಗಂಗಾವತಿ ಕ್ಷೇತ್ರದ ಕೊಪ್ಪಳ ತಾಲ್ಲೂಕಿನಲ್ಲಿ ಸಕ್ಕರೆಕಾರ್ಖಾನೆ ಹಾಗೂ ಫೈಬರ್ ಕಾರ್ಖಾನೆಗಳನ್ನು ಪುನರಾರಂಭಿಸುವುದು.

ಶ್ರೀ ಶ್ರೀರಂಗದೇವರಾಯಲು.—ಮಾನ್ಯ ಅಧ್ಯಕ್ಷರೆ, ಗಂಗಾವತಿ ಕ್ಷೇತ್ರದ ಕೊಪ್ಪಳ ತಾಲ್ಲೂಕಿನಲ್ಲಿ ಸಕ್ಕರೆ ಕಾರ್ಖಾನೆ ಹಾಗೂ ಫೈಬರ್ ಕಾರ್ಖಾನೆಗಳು ಬಹಳ ವರ್ಷಗಳಿಂದಲೂ ಮುಚ್ಚಿರುತ್ತವೆ. ಈ ಕಾರ್ಖಾನೆಗಳಲ್ಲಿ ಸುಮಾರು ೧೨೦೦ ಮಂದಿ ಕಾರ್ಮಿಕರು ಇದ್ದು, ಅವರ ಕುಟುಂಬಗಳು ಬಹಳ ತೊಂದರೆಗೆ ಒಳಗಾಗಿವೆ. ಆಲ್ಲದೆ, ಸಕ್ಕರೆ ಉತ್ಪಾದನೆಗೆ ತೊಂದರೆಯಾಗಿ ರೈತರಿಗೂ ಇದರಿಂದ ತೊಂದರೆಯಾಗಿದೆ. ಫೈಬರ್ ಕಾರ್ಖಾನೆಯಂತೂ ಅತ್ಯಾವಶ್ಯಕವಾದ ಕಾರ್ಖಾನೆಯಾಗಿದ್ದು, ಇತರ ರಾಜ್ಯಗಳಲ್ಲಿ ಇಂತಹ ಕಾರ್ಖಾನೆಗಳಮೇಲೆ ಸರ್ಕಾರದವರು ಹೆಚ್ಚಿನ ಬಂಡವಾಳ ಹೂಡಿ ಕಾರ್ಖಾನೆ ನಡೆಸುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಇನ್ನೂ ಮುಚ್ಚಿರುವುದನ್ನು ನೋಡಿದರೆ ಸರ್ಕಾರಕ್ಕೆ ಈ ಬಗ್ಗೆ ಆಸಕ್ತಿ ಇಲ್ಲವೆನಿಸುತ್ತದೆ. ಆದ್ದರಿಂದ ಮೇಲ್ಕಂಡ ಎರಡೂ ಕಾರ್ಖಾನೆಗಳನ್ನು ಪ್ರಾರಂಭಿಸುವ ಮೂಲಕ ಸರ್ಕಾರಕ್ಕೆ ಉತ್ಪಾದನೆ ಹೆಚ್ಚುವುದಲ್ಲದೆ, ಸಾವಿರಾರು ಕೂಲಿಕಾರರಿಗೂ ಅನುಕೂಲವಾಗುವುದರಿಂದ ಕೂಡಲೇ ಕಾರ್ಖಾನೆಗಳನ್ನು ಪ್ರಾರಂಭಿಸಲು ಸಂಬಂಧಪಟ್ಟವರಿಗೆ ಆದೇಶನೀಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಜೆ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಚಾರವನ್ನು ಕಾರ್ಮಿಕ ಮಂತ್ರಿಗಳ ಗಮನಕ್ಕೆ ತಂದು ಸೂಕ್ತಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ.

೬. ಶಿಕಾರಿಪುರ ತಾಲ್ಲೂಕು ಹಾರಗೊಪ್ಪ ಗ್ರಾಮದಲ್ಲಿ ಮಿನಿವಾಟರ್ ಸ್ಕೀಂ ಮಾಡುವುದು

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ. ಶಿಕಾರಿಪುರ ತಾಲ್ಲೂಕು ಹಾರಗೊಪ್ಪ ಮಂಡಲ ಪಂಚಾಯ್ತಿ ಕೇಂದ್ರವಾಗಿರುವ ಗ್ರಾಮದಲ್ಲಿ ಎರಡು ವರ್ಷಗಳ ಹಿಂದೆ ಸುಮಾರು ಒಂದೂವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ, ಮಿನಿವಾಟರ್ ಸಪ್ಲೈ ಕೆಲಸ ಪೂರ್ಣ ಮಾಡಿದ್ದು, ಈ ಉದ್ದೇಶಕ್ಕಾಗಿ ತೆಗೆದ ಬೋರ್‌ವೆಲ್‌ನಲ್ಲಿ ನೀರು ಬಾರದೆ. ಎರಡು ವರ್ಷವಾಗಿವ್ವರೂ, ಬೇರೆ ಬೋರ್‌ವೆಲ್ ತೆಗೆದು ಮಿನಿ ವಾಟರ್ ಸಪ್ಲೈ ಮೂಲಕ ನೀರು ಸರಬರಾಜು ಮಾಡದೆ ಆಲ್ಲಿಯ ಜನರಿಗೆ ಕಳೆದ ಎರಡು ವರ್ಷಗಳಿಂದ ಕುಡಿಯುವ ನೀರಿಲ್ಲದೆ ತೊಂದರೆ ಆಗಿರುವ ವಿಷಯದ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಹಾರಗೊಪ್ಪ ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. ನನಗೆ ಬಂದಿರುವ ಮಾಹಿತಿ ಪ್ರಕಾರ ಇದು ಒಂದು ಸಣ್ಣ ಹಳ್ಳಿ. ಈ ಹಳ್ಳಿಯ ಜನಸಂಖ್ಯೆ : ೧೦೮೪ ಎಂದು ಹೇಳಿದ್ದಾರೆ. ಆದರೂ ಆಲ್ಲಿ ಮಿನಿವಾಟರ್ ಸಪ್ಲೈ ಸ್ಕೀಂ ಆಗಲೇ ಮಾಡಿದ್ದಾರೆ. ಇದು ಜನವರಿ ೧೯೮೬ರಲ್ಲಿ ಪೂರ್ತಿ ಆಯಿತು. ಇದರಲ್ಲಿ ನೀರು ಕಡಿದು ಆಗಿದ್ದರಿಂದ ೧೯೮೮ರಲ್ಲಿ ಇನ್ನೊಂದು ಬೋರ್‌ವೆಲ್ ತೋಡಿದ್ದಾರೆ, ಅದರಲ್ಲಿ ಗಂಟೆಗೆ ೩೦೦ ಗ್ಯಾಲನ್ ನೀರು ಸಿಕ್ಕಿದೆ. ಮತ್ತೆ ೨ನೇ ಬೋರ್‌ವೆಲ್ ಕೂಡ ಮಾಡಿದ್ದಾರೆ, ಅದರಲ್ಲಿ ಕೂಡ ಗಂಟೆಗೆ ೩೦೦ ಗ್ಯಾಲನ್ ನೀರು ಸಿಕ್ಕಿದೆ. ಇವತ್ತು ಆಲ್ಲಿ ೯ ಬೋರ್‌ವೆಲ್‌ಗಳು ಕೆಲಸ ಮಾಡುತ್ತಿವೆ. ನಮ್ಮ ಲೆಕ್ಕದ ಪ್ರಕಾರ ಹ್ಯಾಂಡ್ ಪಂಪ್ ೧೦ ತಾಸು ವರ್ಕ್ ಮಾಡಿದರೆ. ೪೨ ಸಾವಿರ ಲೀಟರ್ ನೀರು ಸಿಗುತ್ತದೆ. ೯ ಬೋರ್‌ವೆಲ್‌ಗಳಿಂದ ಸರಾಸರಿ ೪೨ ಸಾವಿರ ಲೀಟರ್ ನೀರು ಸಿಗುತ್ತದೆಂದು ಹೇಳಬಹುದು. ಈಗ ನಿಮ್ಮ ಉದ್ದೇಶ ಏನು ಅಂದರೆ ಪವರ್‌ಪಂಪ್ ಹಾಕಿಸಬೇಕೆಂದು, ಆದು ಮಿನಿ ವಾಟರ್ ಸಪ್ಲೈ ಸ್ಕೀಮಿಗೆ ಅನುಕೂಲವಾಗುತ್ತದೆ. ಹ್ಯಾಂಡ್‌ಪಂಪ್‌ನಿಂದ ನೀರು ಸಿಕ್ಕುತ್ತಿದೆ. ನಮಗೆ ಬರತಕ್ಕಂಥ ಕಷ್ಟ ಪವರ್‌ಪಂಪ್ ಹಚ್ಚಬೇಕಾದರೆ ಒಂದು ಬೋರ್‌ವೆಲ್‌ನಿಂದ ಒಂದು ತಾಸಿಗೆ ಕನಿಷ್ಟ ಐದು ಸಾವಿರ ಲೀಟರ್ ಆದರೂ ಸಿಕ್ಕಬೇಕು. ಈಗ ದುರ್ದೈವದಿಂದ ಎಲ್ಲಾ ಒಂಬತ್ತು ಬೋರ್‌ವೆಲ್‌ನಲ್ಲಿ ಐದುನೂರರಿಂದ ಎರಡು ಸಾವಿರದಐನೂರು ಲೀಟರ್ ಮಾತ್ರ ನೀರು ಸಿಕ್ಕುತ್ತಿದೆ, ಆದಕ್ಕಾಗಿ ನಮ್ಮ ಆಫೀಸರ್ಸ್ ಇದಕ್ಕೆ ಪವರ್‌ಪಂಪ್ ಹಚ್ಚಲಿಕ್ಕೆ ಕಷ್ಟ ವಾಗುತ್ತದೆ ಎಂದು ಹೇಳುತ್ತಾರೆ. ಇದರ ಬಗ್ಗೆ ಮಾನ್ಯ ಸದಸ್ಯರು ಸಲಹೆ ಕೊಡುವುದಾದರೆ ಅಥವಾ ಸಾಕಷ್ಟು ಪವರ್ ಪಂಪ್ ಹಚ್ಚಲಿಕ್ಕೆ ಯೋಗ್ಯವಾಗಿರತಕ್ಕ ಒಂದು ಭಾವಿ ನಮಗೆ ಸಿಕ್ಕಿದರೆ ಆಗ ಈ ಪವರ್ ಪಂಪ್ ಹಚ್ಚಲಿಕ್ಕೆ ಸಾಧ್ಯವಾಗುತ್ತದೆ. ನೀರಿನ ಅಭಾವ ಇಲ್ಲ, ಆದರೆ ಪವರ್‌ಪಂಪ್ ಹಚ್ಚುವುದರಲ್ಲಿ ತೊಂದರೆ ಇದೆ.